ಸಾಕ್ಷಿಗೆ ದಿಃ 05.08.2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು 3 ರಿಂದ 9 ನೇ ಪ್ರತಿವಾದಿಯರ ಪರ ಶ್ರೀ ಹೆಚ್ ಬಿ ಐ ವಕೀಲರಿಂದಃ

ಮಲ್ಲಪ್ಪನ ದತ್ತು ಪುತ್ರ ಚನ್ನಪ್ಪಗೌಡ ಎಂದು ನಿಪಿ 44 ಹಾಜರುಪಡಿಸಿದ್ದೇನೆ ಎಂದರೆ ಸರಿ. ಯಾವ ಆಧಾರದ ಮೇಲೆ ಬರೆದಿದ್ದೀರಿ ಎಂದರೆ ನಮ್ಮ ಅಜ್ಜ ಹೇಳಿ ಬರೆಸಿರುತ್ತಾರೆ. ಆಗಿನ ಕಾಲದಲ್ಲಿ ಕೈ ಬರಹದಲ್ಲಿ ಬರವಣಿಗೆ ಆಗುತ್ತಿತ್ತು. ಸದರಿ ಕೈಬರಹದಲ್ಲಿ ದತ್ತಾದ ದಾಖಲೆ ನನ್ನ ಬಳಿ ಇದೆ. ಅದನ್ನು ನ್ಯಾಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಯಾವ ವರ್ಷ, ದಿನಾಂಕ, ಇಸವಿಯಂದು ಚನ್ನಪ್ಪಗೌಡ ಮಲ್ಲಪ್ಪಗೌಡನಿಗೆ ದತ್ತಕಕ್ಕೆ ಹೋದ ಎಂದರೆ ಸಾಕ್ಷಿ ಉತ್ತರ ಕೊಡುವುದಿಲ್ಲ. ಮಲ್ಲಪ್ಪಗೌಡ ಚನ್ನಪ್ಪಗೌಡನನ್ನು ದತ್ತಕಕ್ಕೆ ತೆಗೆದುಕೊಂಡ ಬಗ್ಗೆ ಯಾವುದಾದರೂ ಸರ್ಕಾರಿ ದಾಖಲೆ ಅಥವಾ ರೆವಿನ್ಯೂ ದಾಖಲೆ ಇದೆಯೇ ಎಂದರೆ ಕಂದಾಯ ದಾಖಲೆಯಲ್ಲಿ ನಮೂದಿದೆ. ನಾನು ನ್ಯಾಕ್ಕೆ ಕೊಟ್ಟಿರುವ ಯಾವ ದಾಖಲೆಯಲ್ಲಿಯೂ ಸಹ ಮಲ್ಲಪ್ಪಗೌಡ ಚನ್ನಪ್ಪಗೌಡನನ್ನು ದತ್ತಕಕ್ಕೆ ತೆಗೆದುಕೊಂಡ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಚನ್ನಪ್ಪಗೌಡನನ್ನು ಯಾವಾಗ ತೆಗೆದುಕೊಂಡರು ಎಂದರೆ 1965-66 ಕ್ಕಿಂತ ಮುಂಚೆ ದತ್ತು ತೆಗೆದುಕೊಂಡಿರುತ್ತಾರೆ. ಚನ್ನಪ್ಪಗೌಡನಿಗೆ ಸಾವಮ್ಮ ಹೆಂಡತಿ. ಅವರು ಚನ್ನಬಸಪ್ಪಗೌಡನನ್ನು ದತ್ತಕಕ್ಕೆ ತೆಗೆದುಕೊಂಡಿರುತ್ತಾರೆ. ದತ್ತು ಪತ್ರ ನನ್ನ ಬಳಿ ಇರುವುದಿಲ್ಲ ನಾನು ನಿಪಿ 44 ವಂಶವೃಕ್ಷವನ್ನು ಅನುಕೂಲಕ್ಕೆ ತಕ್ಕಂತೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಮಲ್ಲಪ್ಪಗೌಡ ಚನ್ನಪ್ಪಗೌಡನನ್ನು ದತ್ತು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಾವಮ್ಮ ಚನ್ನಬಸಪ್ಪಗೌಡನನ್ನು ದತ್ತು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚನ್ನಬಸಪ್ಪಗೌಡನನ್ನು ಯಾವ ಊರಿನಿಂದ ದತ್ತು ತೆಗೆದುಕೊಂಡರು ಎಂದರೆ ಗೊತ್ತಿಲ್ಲ. ಚನ್ನಪ್ಪಗೌಡನನ್ನು ಯಾವ ಊರಿನಿಂದ ದತ್ತು ತೆಗೆದುಕೊಂಡರು ಎಂದರೆ ಗೊತ್ತಿಲ್ಲ. ಚನ್ನಪ್ಪಗೌಡ ಮತ್ತು ಚನ್ನಬಸಪ್ಪಗೌಡರನ್ನು ಯಾವ ಊರಿನಿಂದ ದತ್ತು ತೆಗೆದುಕೊಂಡರು ಎಂದು ವಕೀಲರಿಗೆ ಮಾಹಿತಿ ಕೊಟ್ಟಿದ್ದೀರ ಎಂದರೆ ವಂಶವೃಕ್ಷ ಕೊಟ್ಟಿದ್ದೇವೆ. ಪ್ರತಿವಾದಿಯರು ತಕರಾರು ಸಲ್ಲಿಸಿದ ನಂತರ ಚನ್ನಪ್ಪಗೌಡ ಮತ್ತು ಚನ್ನಬಸಪ್ಪಗೌಡರನ್ನು ಯಾವ ಊರಿನಿಂದ ಮತ್ತು ಯಾವಾಗ ದತ್ತು ತೆಗೆದುಕೊಂಡರು ಎಂದು ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೀರಿಯೇ ಎಂದರೆ ಸಾಕ್ಷಿ ಉತ್ತರ ಕೊಡುವುದಿಲ್ಲ. ಚನ್ನಬಸಪ್ಪಗೌಡನಿಗೆ ಪಾರ್ವತಮ್ಮ ಮತ್ತು ಗೌರಮ್ಮ ಇಬ್ಬರು ಹೆಂಡತಿಯರು. ಗೌರಮ್ಮ ಮತ್ತು ಪಾರ್ವತಮ್ಮ ಅಕ್ಕತಂಗಿಯರು ಗಿಣಿವಾಲದವರು. ನನ್ನ ತಂದೆಗೆ ಗಿಣಿವಾಲದಲ್ಲಿ ಆಸ್ತಿ ಇತ್ತು. ಜೋಗಿಹಳ್ಳಿ ಗ್ರಾಮದಲ್ಲಿ ನಮ್ಮ ತಂದೆಗೆ ಆಸ್ತಿ ಇತ್ತು. ನಿಪಿ 44 ರ ವಂಶವೃಕ್ಷವನ್ನು ಆಧರಿಸಿ ದಾವಾ ಬರೆದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ನಾನೇ ನಿಪಿ 44 ನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ. ಮಲ್ಲೇಶಪ್ಪನಿಗೆ ಈರಮ್ಮ, ಗಂಗಮ್ಮ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಮಲ್ಲಪ್ಪಗೌಡನಿಗೆ 3 ಹೆಣ್ಣು ಮಕ್ಕಳು. ಚನ್ನಬಸಮ್ಮ, ವೀರರಬಸಮ್ಮ

ಮತ್ತು ಈರಮ್ಮ ಮಕ್ಕಳು. ಈರಮ್ಮನನ್ನು ಗಂಗೊಳ್ಳಿಯ ಗಂಡಿಗೆ ವಿವಾಹ ಮಾಡಿದ್ದಾರೆ ಎಂದರೆ ಸರಿ. ಪಾರ್ವತಮ್ಮನ ಮಗಳು ಗಂಗಮ್ಮ ಎಂದರೆ ಸರಿ. ಗಂಗಮ್ಮನ ತಂದೆ ಹೆಸರು ಸಣ್ಣಪ್ಪ ಎಂದರೆ ಸರಿ. ಗಂಗಮ್ಮನ ಗಂಡ ಚನ್ನಪ್ಪಗೌಡ ಎಂದರೆ ಸರಿಯಲ್ಲ. ವೀರನಗೌಡ. ಚನ್ನಪ್ಪಗೌಡರ ಮಗ ಚನ್ನಬಸಪ್ಪಗೌಡ ಎಂದರೆ ಸರಿ. ಚನ್ನಪ್ಪಗೌಡ ದ್ವಾರಹಳ್ಳಿ ಗ್ರಾಮಕ್ಕೆ ಅಳಿತನಕ್ಕೆ ನಮ್ಮ ಮನೆಗೆ ಬಂದರು ಎಂದರೆ ಸರಿಯಲ್ಲ. ಚನ್ನಬಸಪ್ಪಗೌಡರಿಂದ ರುದ್ರಗೌಡ ಮತ್ತು ಚನ್ನಪ್ಪಗೌಡನಿಗೆ ಆಸ್ತಿ ಬಂದಿದ್ದ ಕಾರಣ ಅದು ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ರುದ್ರಗೌಡ ನನ್ನ ತಂದೆ. ಅವರಿಗೆ ಆರ್ ಸಿ ಪಾಟೀಲ್ ಎಂದು ಕರೆಯುತ್ತಾರೆ. ಚನ್ನಪ್ಪಗೌಡ ನಮ್ಮ ತಂದೆಯ ತಮ್ಮ. ನಮ್ಮ ತಂದೆ ಮತ್ತು ತಂದೆಯ ತಮ್ಮ 1965 ರಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದಾರೆ. 1972 ರಲ್ಲಿ ಇಬ್ಬರು ಗಂಡು ಮಕ್ಕಳಿಗೆ ನಮ್ಮ ತಂದೆ ಆಸ್ತಿ ಪಾಲು ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನಮ್ಮ ತಂದೆಗೆ ಚನ್ನಬಸಪ್ಪಗೌಡ ಮತ್ತು ಮಲ್ಲನಗೌಡ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. 3 ನೇ ಪ್ರತಿವಾದಿ ಕವಿತಾ ಮಲ್ಲನಗೌಡ ಹೆಂಡತಿ ಎಂದರೆ ಸರಿ. ಆರ್ ಸಿ ಪಾಟೀಲ್ ಮಕ್ಕಳಿಗೆ 1972 ರಲ್ಲಿ ಹಿಸ್ಸೆ ಮಾಡಿಕೊಟ್ಟ ನಂತರ ಅವರು ಕೂಡ ಒಂದು ಹಿಸ್ಸೆ ಇಟ್ಟುಕೊಂಡಿದ್ದರು ಎಂದರೆ ಸರಿ. 1972 ರಿಂದ ಸದರಿ ಹಿಸ್ಸೆ ಸ್ವತ್ತು ಆರ್ ಸಿ ಪಾಟೀಲ್ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸ.ನಂ. 34 9 ಎಕರೆ 19 ಗುಂಟೆ ಮಲ್ಲನಗೌಡನಿಗೆ ಹೋಗಿದ್ದ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯನ್ನು ಐಟಂ ನಂ. 14 ಎಂದರೆ ಅದನ್ನು ದಾವಾದಲ್ಲಿ ಸೇರಿಸಿಲ್ಲ. ನಾನು ನನ್ನ ತಂದೆಯ ಹಿಸ್ಸೆ ಆಸ್ತಿಯಲ್ಲಿ ಮಾತ್ರ ಪಾಲು ಕೇಳುತ್ತಿದ್ದೇನೆ ಸ.ನಂ. 60 ರಲ್ಲಿ ಐಟಂ ನಂ. 7 ರಲ್ಲಿ 6 ಎಕರೆ ನಮ್ಮ ತಂದೆ ಕವಿತಾಗೆ ದಾನ ಪತ್ರ ಮಾಡಿದ್ದಾರೆ ಸ.ನಂ. 60 ರಲ್ಲಿ ನಮ್ಮ ತಂದೆಗೆ ಕೇವಲ 6 ಎಕರೆ ಇದೆ. 12 ಎಕರೆ 3 ಗುಂಟೆ ಇಲ್ಲ. ಅದು ತಪ್ಪಾಗಿ ಐಟಂ ನಂ. 7 ರಲ್ಲಿ ನಮೂದಾಗಿದೆ. 6 ಎಕರೆ ಯಾರ ಹೆಸರಿಗೆ ಇದೆ ಗೊತ್ತಿಲ್ಲ. ಸ.ನಂ. 62 ರಲ್ಲಿ ಐಟಂ ನಂ. 8 ರ ಬಗ್ಗೆ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಸ.ನಂ. 64 ರಲ್ಲಿ 6 ಎಕರೆ ಇದೆ. ನಾನು 12 ಎಕರೆ 23 ಗುಂಟೆ ಎಂದು ಬರೆದಿದ್ದೇನೆ ಎಂದರೆ ಸರಿಯಲ್ಲ. ವಿಸ್ತೀರ್ಣ ನಾನು ತಪ್ಪಾಗಿ ನಮೂದು ಮಾಡಿದ್ದೇನೆ ಎಂದರೆ ಸಾಕ್ಷಿ ಉತ್ತರ ಕೊಡವುದಿಲ್ಲ. ಸ.ನಂ. 65 ರಲ್ಲಿ 4 ಎಕರೆ ಇದೆ. ನಾನು 8 ಎಕರೆ 6 ಗುಂಟೆ ಎಂದು ಬರೆದಿದ್ದೇನೆ ಎಂದರೆ 2 ಸ. ನಂ. ಗಳನ್ನು ಸೇರಿಸಿ ಬರೆದಿದ್ದೇನೆ. ನಾನು ನಮ್ಮ ತಂದೆ ಪಾಲಿಗೆ ಬಂದ ಆಸ್ತಿಗಳಿಗಿಂತ ಹೆಚ್ಚಿಗೆ ಆಸ್ತಿ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 62, 64 ಮತ್ತು 65 ರ ಚೆಕ್ಕುಬಂಧಿ ಗೊತ್ತಿಲ್ಲ. ನಮ್ಮ ತಂದೆ ಜಮೀನು ನೋಡಿಕೊಳ್ಳುತ್ತಿರುವ ಕಾರಣ ನನಗೆ ಹೆಚ್ಚಿನ ವಿವರ ಗೊತ್ತಿಲ್ಲ ಎಂದರೆ ಸರಿ. ನಾನು ವಿಸ್ತೀರ್ಣ ತಪ್ಪಾಗಿ ನಮೂದು ಮಾಡಿದ್ದೇನೆ ಎಂದರೆ ಸರಿ. ಸ.ನಂ. 89/1 ರಲ್ಲಿ 1 ಎಕರೆ ಮಾರಾಟ ಮಾಡಿದ್ದಾರೆ. ನನಗೆ ದಾವಾ ಸ್ವತ್ತಿನ ಬಗ್ಗೆ ಮಾಹಿತಿ ಇಲ್ಲ, ತಪ್ಪಾಗಿ ವಿಸ್ತೀರ್ಣ ಮತ್ತು ಚೆಕ್ಕುಬಂದಿ ನಮೂದು ಮಾಡಿದ್ದೇನೆ ಎಂದರೆ ಚೆಕ್ಕುಬಂಧಿ ಗೊತ್ತಿಲ್ಲ. ಸ.ನಂ. 60, 64 ಮತ್ತು 65 ರಲ್ಲಿ ಬೇರೆಬೇರೆಯವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 6 ನೆ ಪ್ರತಿವಾದಿ ಕುಸುಮಾ ಪಾಟೀಲ್ ರವಾನ್ನು ಏಕೆ

ದಾವಾದಲ್ಲಿ ಸೇರಿಸಿದ್ದೀರಿ ಎಂದರೆ ನಮ್ಮ ತಂದೆ ಅವರನ್ನು ಉಪಪತ್ನಿಯನ್ನಾಗಿ ಇಟ್ಟುಕೊಂಡಿದ್ದರು. ಕುಸುಮಾ ಪಾಟೀಲ್ ಸುಮಾರು 30 ವರ್ಷದಿಂದ ನಮ್ಮ ಜೊತೆಗೆ ಬಾಳ್ವೆ ಮಾಡಿದ್ದರು ಎಂದರೆ ಸರಿ. ನನ್ನ ತಾಯಿ ದ್ವಾರಹಳ್ಳಿಯಲ್ಲಿ ಇದ್ದರು ಎಂದರೆ ಸರಿ. ಕುಸುಮಾರವರು ಅಗಸನಹಳ್ಳಿಯಲ್ಲಿ ನಮ್ಮ ತಂದೆಯೊಂದಿಗೆ ವಾಸಿಸುತ್ತಿದ್ದರು ಎಂದರೆ ಸರಿ. ಕುಸುಮಾರವರೇ ನಮ್ಮ ತಂದೆಯೊಂದಿಗೆ ಕೊನೆವರೆಗೂ ಜೀವಿಸುತ್ತಿದ್ದರು ಎಂದರೆ ಸರಿ. ನಮ್ಮ ಎಲ್ಲಾ ವಿವಾಹ ಕುಟುಂಬದಲ್ಲಿ ಆಗಿದೆ ಎಂದರೆ ಸರಿ. ಆದರೆ ನಮ್ಮ ತಂದೆ ಮಾಡಿಲ್ಲ. 2004 ರಲ್ಲಿ ನನ್ನ ವಿವಾಹವಾಗಿದೆ. ಲಗ್ನಪತ್ರಿಕೆ ಇದೆ. ನಮ್ಮ ತಂದೆ ಜವಾಬ್ದಾರಿಯಿಂದು ಮದುವೆ ಮಾಡಿಲ್ಲ. ನನ್ನ ದೊಡ್ಡ ಅಕ್ಕ ಮದುವೆ ಮಾಡಿದ್ದಾರೆ. ನನ್ನ ದೊಡ್ಡ ಅಕ್ಕನ ವಿವಾಹವನ್ನು ನನ್ನ ತಂದೆಯ ತಂಗಿ ಮಾಡಿರುತ್ತಾರೆ. ನಮ್ಮ ತಂದೆ ಅವರ ಪಾಲಿಗೆ ಬಂದ ಆಸ್ತಿಯ ಬಳಸಿ ನಮ್ಮ ಎಲ್ಲಾ ಹೆಣ್ಣು ಮಕ್ಕಳ ವಿವಾಹ ಮಾಡಿದ್ದಾರೆ ಎಂದರೆ ಸರಿಯಲ್ಲ. ಎರಡೂ ಆಸ್ತಿಗಳನ್ನು ಕುಸುಮಾರವರಿಗೆ ಅವರು ನೋಡಿಕೊಂಡ ಕಾರಣ ಅವರಿಗೆ ದಾನಪತ್ರ ಮಾಡಿದ್ದಾರೆ ಎಂದರೆ ಸರಿ. ಕುಸುಮಾಗೇ ಮುಂದೆ ಯಾವುದೇ ತೊಂದರೆ ಆಗಬಾರದು ಎಂದು ಹಿಸ್ಸಾ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದು ಪಿತ್ರಾರ್ಜಿತ ಸ್ವತ್ತು. 2012 ರವರೆಗೆ ನಮ್ಮ ತಂದೆಯನ್ನು ಕುಸುಮಾರವರೇ ನೋಡಿಕೊಂಡಿರುತ್ತಾರೆ. ಹೆಂಡತಿ ಮಕ್ಕಳನ್ನು ನಮ್ಮ ತಂದೆ ಮನೆಗೆ ಸೇರಿಸುತ್ತಿರಲಿಲ್ಲ. ನಮ್ಮ ತಂದೆ ಅವರ ಸ್ವಯಾರ್ಜಿತ ಆಸ್ತಿಯನ್ನು ಕುಸುಮಾರವರಿಗೆ ದಾನ ಪತ್ರ ಮಾಡಿದ್ದಾರೆ ಎಂದರೆ ಸರಿಯಲ್ಲ 3 ನೇ ಪ್ರತಿವಾದಿ ಕವಿತಾ ಪಾಟೀಲ್ ಈಗ ಅಗಸನಹಳ್ಳಿಯಲ್ಲಿ ಕುಸುಮನೊಂದಿಗೆ ಇದ್ದಾರೆ ಎಂದರೆ ನನ್ನ ಅಣ್ಣ ಮಲ್ಲನಗೌಡ ಮರಣ ನಂತರ ಕವಿತಾ ಕುಸುಮಾರೊಂದಿಗೆ ವಾಸಿಸುತ್ತಿದ್ದಾರೆ. ಕವಿತಾ ಕೂಡ ನಮ್ಮ ತಂದೆ ಮತ್ತು ಕುಸುಮಾ ಪಾಟೀಲ್ 2 ನೇ ಮಗು ಆಗುವ ತನಕ ಜೊತೆ ವಾಸಿಸುತ್ತಿದ್ದರು ಎಂದರೆ ಸರಿ. ನನ್ನ ಅಣ್ಣ ಕುಸುಮಾ ಪಾಟೀಲ್ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಕೆಲಸ ಇದ್ದಾಗ ಹೋಗುತ್ತಿದ್ದರು. ಸ.ನಂ. 60 ರಲ್ಲಿ 6 ಎಕರೆಯನ್ನು ಕವಿತಾರಿಗೆ ನಮ್ಮ ತಂದೆ ದಾನಪತ್ರ ಬರೆದಿದ್ದಾರೆ ಎಂದರೆ ಸರಿ ಕವಿತಾಗೆ ಎರಡು ಸಣ್ಣ ಮಕ್ಕಳಿದ್ದು, ಆಕೆ ನಮ್ಮ ತಂದೆಯೊಂದಿಗೆ ಇದ್ದ ಕಾರಣ ಪ್ರೀತಿ ವಿಶ್ವಾಸ ಹೆಚ್ಚಿದ್ದ ಕಾರಣ ಅವರಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಪಿತ್ರಾರ್ಜಿತ ಆಸ್ತಿಯನ್ನು ಬರೆದುಕೊಟ್ಟಿದ್ದಾರೆ. ಪಿತ್ರಾರ್ಜಿತ ಆಸ್ತಿಗಳನ್ನು ದಾನಪತ್ರಗಳ ಮೂಲಕ ಕೊಟ್ಟಿರುವುದು ನನ್ನ ವಾದ ಎಂದರೆ ಸರಿ ಪಿತ್ರಾರ್ಜಿತ ಆಸ್ತಿಯನ್ನು ದಾನ ಮಾಡಿದ್ದಾರೆ ಎಂಬುದನ್ನು ಹೊರತುಪಡಿಸಿ ಬೇರೆ ಯಾವುದೇ ವಾದ ಇಲ್ಲ ಎಂದರೆ ನಮ್ಮ ಯೋಗಕ್ಷೇಮ ಅವರು ನೋಡಿಕೊಂಡಿಲ್ಲ. ನಮ್ಮ ತಂದೆ ಮರಣದವರೆಗೆ ಮಾನಸಿಕ ಸ್ಥಿತಿ ಸರಿಯಾಗಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಸಕ್ಕರೆ ಖಾಯಿಲೆಗೆ ಸಂಬಂಧಿಸಿದಂತೆ, ಕಿಡ್ನಿಗೆ ಸಂಬಂಧಿಸಿದಂತೆ ವೈದ್ಯರ ಬಳಿ ಚಿಕಿತ್ಸೆ ಪಡೆದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಮ್ಮ ತಂದೆಗೆ ಮಾನಸಿಕ ಸ್ಥಿತಿ ಚೆನ್ನಾಗಿಲ್ಲ ಎಂದು ತೋರಿಸುವ ದಾಖಲೆ ಇಲ್ಲ ಎಂದರೆ ಸರಿ. ಮಾನಸಿಕ ರೋಗ ತಜ್ಞರ

ಬಳಿ ನಮ್ಮ ತಂದೆಯನ್ನು ತೋರಿಸಿಲ್ಲ.  ನಮ್ಮ ತಂದೆ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಪ್ರಬಲವಾಗಿದ್ದರು ಎಂದರೆ ಸರಿ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಲ್ಲಿ ಲೇವಾದೇವಿ ವ್ಯವಹಾರದ ವಿಚಾರವಾಗಿ ನಮ್ಮ ತಂದೆ ವಿರುದ್ಧ 10 ಲಕ್ಷ ರೂಗಳಿಗೆ ಆರ್ಬಿಟ್ರೇಷನ್ ನಡೆದು ಡಿಕ್ರಿಯಾಯಿತು ಎಂದರೆ ಗೊತ್ತಿಲ್ಲ  ಸದರಿ ಡಿಕ್ರಿಯಾದ ನಂತರ ಆಸ್ತಿಯನ್ನು ಜಪ್ತು ಮಾಡಲು ಮುಂದಾದರು ಎಂದರೆ ಗೊತ್ತಿಲ್ಲ. ನಂತರ ಸೊಸೈಟಿ ಮತ್ತು ನಮ್ಮ ತಂದೆಯ ನಡುವೆ ಮಧ್ಯಸ್ಥಗಾರರ ನಡುವೆ ಪಂಚಾಯತಿ ನಡೆದು  7.5 ಲಕ್ಷ ರೂಳಿಗೆ ತೀರ್ಮಾನವಾಯಿತು ಎಂದರೆ ಗೊತ್ತಿಲ್ಲ. ಬಸವರಾಜ್ ಗೆ ನಮ್ಮ ತಂದೆ 6 ಎಕರೆ 7 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ 7.5 ಲಕ್ಷ ರೂಗಳನ್ನು ತೀರಿಸುವಾಗಿ ಬಸವರಾಜ್ ಗೆ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕುಟುಂಬದ ಅಭಿವೃದ್ಧಿಗೋಸ್ಕರ 8 ನೇ ಪ್ರತಿವಾದಿಗೆ ಸ.ನಂ. 89/2 ರನ್ನು ಮಾರಿದ್ದಾರೆ ಎಂದರೆ ಅವರ ಮೋಜು ಮಸ್ತಿಗೆ ಮಾರಾಟ ಮಾಡಿದ್ದಾರೆ. ಸದರಿ ಆಸ್ತಿಯನ್ನು ಬಿಟ್ಟು ಬೇರೆ ಯಾವುದೇ ಆಸ್ತಿಯನ್ನು ಮಾರಿಲ್ಲ. ಸಾಲ ತೀರಿಸುವ ಸಲುವಾಗಿ ಸದರಿ ಆಸ್ತಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸ.ನಂ. 5 ಅಗಸನಹಳ್ಳಿಯಲ್ಲಿ ರೈಸ್ ಮಿಲ್ ಇದೆ. ಸ.ನಂ. 5 ನ್ನು ನಮ್ಮ ತಂದೆ ಖರೀದಿ ಮಾಡಿದ್ದಾರೆ ಎಂದರೆ ಅದು ಪಿತ್ರಾರ್ಜಿತ ಆಸ್ತಿ.  ನಮ್ಮ ತಂದೆ ಮತ್ತು ಚಿಕ್ಕಪ್ಪ ಪಾಲುಗಾರರಾಗಿ ರೈಸ್ ಮಿಲ್ ಪ್ರಾರಂಭ ಮಾಡಿದರು ಎಂದರೆ ಸರಿ.  ರೈಸ್ ಮಿಲ್ ನಡೆಸುವಾಗ ಲೇವಿ ಭತ್ತ ಖರೀದಿ ಮಾಡಿ ಟಿ ಎ ಪಿ ಎಂ ಸಿ ಎಸ್ ಮಾರಾಟ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ರೈಸ್ ಮಿಲ್ ಚೆನ್ನಾಗಿ ನಡೆಯುತ್ತಿತ್ತು.  ದೊಡ್ಡ ದೊಡ್ಡ ಮಿಲ್ ಗಳು ಆದ ನಂತರ ನಮ್ಮ ತಂದೆ ನಡೆಸುತಿತದ್ದ ರೈಸ್ ಮಿಲ್ ವ್ಯವಹಾರ ಕಡಿಮೆಯಾಯಿತು ಎಂದರೆ ಸರಿ. ಆಗ ಅವರು ಪಾಲುಗಾರಿಗೆ ಬೇಡ ಎಂದು ನಮ್ಮ ಚಿಕ್ಕಪ್ಪನಿಗೆ ವ್ಯವಹಾರ ಬಿಟ್ಟುಕೊಡುತ್ತೇನೆ ಎಂದು ಹೇಳುತ್ತಿದ್ದರು ಎಂದರೆ ಸರಿ. ಕುಸುಮಾ ಪಾಟೀಲ್ ಸದರಿ ರೈಸ್ ಮಿಲ್ ನ್ನು ಖರೀದಿ ಮಾಡಿದ್ದಾರೆ ಎಂದರೆ ಅದು ಪಿತ್ರಾರ್ಜಿತ ಸ್ವತ್ತಾಗಿದ್ದು, ಅದನ್ನು ಖರೀದಿ ಮಾಡಲು ಬರುವುದಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ  ಸಮಯ ಕೋರಿದ್ದು ಕಲ್ಪಿಸಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸೊರಬ.

ಸಮಯಃ 12.30 ರಿಂದ 2.00 ಗಂಟೆ